# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 88
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04.03.2025
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರಿ ಸ್ವಾಮ್ಯದ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯದ ಕಾರ್ಖಾನೆಯಲ್ಲಿ ಎಥೆನಾಲ್ ಘಟಕ ಸ್ಥಾಪಿಸುವ ಕುರಿತಂತೆ ಪರಿಶೀಲನೆಯಲ್ಲಿದ್ದ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ; ಇದ್ದಲ್ಲಿ, ಯೋಜನೆಗೆ ಅನುಮೋದನೆ ನೀಡಿರುವ ಆದೇಶ ಪ್ರತಿ ಹಾಗೂ ಈ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಸುವುದು: | ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ಎಥನಾಲ್ ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆಯು ಪ್ರಸ್ತುತ ಪರಿಶೀಲನೆಯಲ್ಲಿದೆ. |
| (ಆ) | ಸದರಿ ಕಾರ್ಖಾನೆಯಲ್ಲಿ ಎಷ್ಟು ಕೋಟಿ ಅಂದಾಜು ವೆಚ್ಚದಲ್ಲಿ ಎಥೆನಾಲ್ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ? ಪ್ರಾರಂಭಿಕವಾಗಿ ಎಷ್ಟು ಕೋಟಿ ರೂಪಾಯಿ ಅನುದಾನ ಒದಗಿಸಲು ಹಣಕಾಸು ಇಲಾಖೆ ಅನುಮತಿಸಿದೆ; ಅಥವಾ ಈ ಬಗ್ಗೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; (ವಿವರ ನೀಡುವುದು) | "ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ನಿರ್ಮಿಸಲಾಗುವುದು. ಸರ್ಕಾರದ ಅನುದಾನ, ಇತರೆ ಮೂಲಗಳು ಹಾಗೂ ಕಾರ್ಖಾನೆಯ Asset Monetisation ಮೂಲಕ ಸಂಪನ್ಮೂಲವನ್ನು ಕ್ರೋಢೀಕರಿಸುವುದು" ಎಂದು 2024-25ನೇ ಸಾಲಿನ ಆಯವ್ಯಯ ಘೋಷಣಾ ಖಂಡಿಕೆ:327ರಲ್ಲಿ ಘೋಷಿಸಲಾಗಿರುತ್ತದೆ. |
| (ಇ) | ಸದರಿ ಕಾರ್ಖಾನೆಯಲ್ಲಿ ಎಥೆನಾಲ್ ಘಟಕ ಸ್ಥಾಪಿಸುವ ಕುರಿತಂತೆ ಸರ್ಕಾರಕ್ಕೆ ಸಲ್ಲಿಸಲಾಗಿರುವ ವಿಸ್ತೃತ ಯೋಜನಾ ವರದಿಯ (ಡಿ.ಪಿ.ಆರ್) ಮುಖ್ಯಾಂಶಗಳೇನು; (ವರದಿಯ ಪ್ರತಿ ನೀಡುವುದು) ಸದರಿ ಕಾರ್ಖಾನೆಯಲ್ಲಿ ಹೊಸ ಮಿಲ್, ಬಾಯ್ಲರ್ ಘಟಕ ಅಳವಡಿಕೆ ಹಾಗೂ ಹಾಲಿ ಇರುವ ಸಕ್ಕರೆ ಉತ್ಪಾದನಾ ವಿಭಾಗವನ್ನು ಆಧುನೀಕರಣಗೊಳಿಸುವುದು ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕೆಲಸಗಳಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: | ಮೇಲ್ಕಂಡ ಘೋಷಣೆಯ ಅನುಷ್ಠಾನದಲ್ಲಿ ದಿ ಮೈಸೂರು ಷುಗರ್ ಕಂಪನಿಯಲ್ಲಿ ಎಥನಾಲ್ ಘಟಕದ ಸ್ಥಾಪನೆ, ಹೊಸ ಮಿಲ್‌ಬಾಯ್ಲರ್ ಘಟಕ ಅಳವಡಿಕೆ ಹಾಗೂ ಹಾಲಿ ಇರುವ ಸಕ್ಕರೆ ಉತ್ಪಾದನಾ ವಿಭಾಗವನ್ನು ಆಧುನೀಕರಣಗೊಳಿಸುವ ಪ್ರಸ್ತಾವನೆಯನ್ನು ಸಹ ಒಳಗೊಂಡಿರುತ್ತದೆ. ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ – ಈ ಸಂಸ್ಥೆಯಿಂದ ಸಿದ್ಧಪಡಿಸಿರುವ ಪರಿಷ್ಕೃತ ವಿಸ್ತೃತ ಯೋಜನಾ ವರದಿಯನ್ನು ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.<br><br>ಸದರಿ ಪರಿಷ್ಕೃತ ಯೋಜನಾ ವರದಿಯಲ್ಲಿನ ಮೈಸೂರು ಷುಗರ್ ಕಂಪನಿಯಲ್ಲಿ 80 K.L.P.D ಎಥನಾಲ್ ಘಟಕವನ್ನು {Ethanol Plant With Slops Fired Boiler on **C** Molasses Feedstock} ಸ್ಥಾಪಿಸುವ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯ ಕುರಿತ ಪ್ರಸ್ತಾವನೆಗೆ ಈಗಾಗಲೇ ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳ ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ. ಸದರಿ ಪ್ರಸ್ತಾವನೆಯ ಕುರಿತು ಸೂಕ್ತ ತೀರ್ಮಾನಕ್ಕಾಗಿ ಸಚಿವ ಸಂಪುಟ ಸಭೆಗೆ ಮಂಡಿಸಲು ಕ್ರಮವಹಿಸಲಾಗುತ್ತಿದೆ. |

...2



ile No. C I/28/SGF/2025-SUGAR2-C&I SEC (Computer No. 1694543)
enerated from eOffice by RAGHU R, C&I-SA(I/C)(RR), SENIOR ASSISTANT, COMMERCE AND INDUSTRIES SECRETARIAT on 19/05/2026 01:18 PM

| | | |
|---|---|---|
| (ಈ) | ಮಂಡ್ಯ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಪೈಕಿ ಎಥೆನಾಲ್ ಘಟಕ ಹೊಂದಿರುವ ಮತ್ತು ಹೊಂದಿಲ್ಲದಿರುವ ಕಾರ್ಖಾನೆಗಳು ಯಾವುವು ವಿವರ ನೀಡುವುದು? (ಕಾರ್ಖಾನೆವಾರು ಕಬ್ಬು ನುರಿಸುವ ಸಾಮರ್ಥ್ಯ ಮತ್ತು ಡಿಸ್ಟಿಲರಿ ಸಾಮರ್ಥ್ಯದ ವಿವರ ನೀಡುವುದು. | ಮಂಡ್ಯ ಜಿಲ್ಲೆಯಲ್ಲಿರುವ ಎಥನಾಲ್ ಘಟಕವನ್ನು ಹೊಂದಿರುವ ಮತ್ತು ಹೊಂದಿಲ್ಲದಿರುವ ಕಾರ್ಖಾನೆಗಳ ವಿವರಗಳನ್ನು ಮತ್ತು **ಕಾರ್ಖಾನೆಗಳ** ಕಬ್ಬು ನುರಿಸುವ ಸಾಮರ್ಥ್ಯ ಮತ್ತು ಡಿಸ್ಟಿಲರಿ ಸಾಮರ್ಥ್ಯದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |

**ಸಂಖ್ಯೆ** : ಸಿಐ 28 ಎಸ್‌ಜಿಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು



File No. C I/28/SGF/2025-SUGAR2-C&I SEC (Computer No 1694543)
Generated from eOffice by RAGHU R, C&I-SA(I/C)(RR), SENIOR ASSISTANT, COMMERCE AND INDUSTRIES SECRETARIAT on 19/05/2026 01:18 PM

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 26(88) ಕ್ಕೆ ಅನುಬಂಧ**

| ಕ್ರಮ ಸಂ | ಕಾರ್ಖಾನೆಯ ಹೆಸರು | ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ (ಟಿ.ಸಿ.ಡಿ) | ಡಿಸ್ಟಲರಿ ಸಾಮರ್ಥ್ಯ (ಕೆ.ಎಲ್.ಪಿ.ಡಿ) | ಎಥನಾಲ್ ಸಾಮರ್ಥ್ಯ (ಕೆ.ಎಲ್.ಪಿ.ಡಿ) |
|---|---|---|---|---|
| 1 | ಕೋರಮಂಡ ಶುಗರ್ಸ್, ಮಾಕವಳ್ಳಿ ತಾಲ್ಲೂಕು: ಕೆ.ಆರ್.ಪೇಟೆ ಜಿಲ್ಲೆ: ಮಂಡ್ಯ | 4800 | ಇಲ್ಲ | ಇಲ್ಲ |
| 2 | ಮೈಸೂರು ಸಕ್ಕರೆ ಕಂಪನಿ ನಿ, ಸಕ್ಕರೆ ನಗರ, ಮಂಡ್ಯ | 5000 | 36.00 | ಇಲ್ಲ |
| 3 | ಎಂ.ಆರ್.ಎನ್ ಕೇನ್ ಪವರ್ ಅಂಡ್ ಬಯೋ ರಿಫೈನರೀಸ್ ಪ್ರೈಲಿ, (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ತಾಲ್ಲೂಕು: ಪಾಂಡವಪುರ, ಜಿಲ್ಲೆ: ಮಂಡ್ಯ | 3500 | ಇಲ್ಲ | ಇಲ್ಲ |
| 4 | ಎನ್.ಎಸ್.ಎಲ್ ಶುಗರ್ಸ್, ಕೊಪ್ಪ ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 5000 | - | 60.00 |
| 5 | ಶ್ರೀಚಾಮುಂಡೇಶ್ವರಿ ಶುಗರ್ಸ್, ಭಾರತಿ ನಗರ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 5000 | - | 50.00 |

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು



ile No. C I/28/SGF/2025-SUGAR2-C&I SEC (Computer No. 1694543)
Generated from eOffice by RAGHU R, C&I-SA(I/C)(RP), SENIOR ASSISTANT, COMMERCE AND INDUSTRIES SECRETARIAT on 19/05/2026 01:19 PM